ಆ) ಬೆಳೆ ಹಾನಿ ಪರಿಹಾರವನ್ನು ಕೇಂದ್ರ ಸರ್ಕಾರ ನಿಗಧಿಪಡಿಸಿರುವ ಮಾರ್ಗಸೂಚಿಯ ಪ್ರಕಾರ ನೀಡಬಹುದಾಗಿದ್ದು ರಾಜ್ಯ ಸರ್ಕಾರದ ಮುಂದೆ ಈ ಪ್ರಸ್ತಾವನೆ ಇರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಅಧಿಕಾರಿಗಳ ಕೊರತೆ

(199) 127

ಡಾ: ಮಾಲಕರೆಡ್ಡಿ ಎ.ಬಿ.(ಯಾದಗಿರಿ)

ಅ) ಯಾದಗಿರಿ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ಬಹುತೇಕ ಇಲಾಖೆಗಳಿಗೆ ಪ್ರಭಾರ ಅಧಿಕಾರಿಗಳು ನೇಮಕಗೊಂಡಿದ್ದು, ಖಾಯಂ ಅಧಿಕಾರಿಗಳಿಲ್ಲದೆ ಅಭಿವೃದ್ಧಿ ಕೆಲಸಗಳಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಪ್ರಭಾರ ಅಧಿಕಾರಿಗಳು ಅವರವರ ಜಿಲ್ಲೆಗಳ ಕೆಲಸಗಳಲ್ಲಿ ತಲ್ಲೀನರಾಗಿ ಈ ಜಿಲ್ಲೆಯತ್ತ ಗಮನ ಹರಿಸಲು ಸಾಧ್ಯವಾಗದೆ ಜನತೆಗೆ ತೊಂದರೆಯಾಗಿದ್ದರೂ ಸರ್ಕಾರ ಈವರೆಗೂ ಖಾಯಂ ಅಧಿಕಾರಿಗಳ ನೇಮಕಕ್ಕೆ ಕ್ರಮ ವಹಿಸದೆ ಇರುವುದಕ್ಕೆ ಕಾರಣಗಳೇನು?

ಇ) ಬಹುತೇಕ ಇಲಾಖೆಗಳಲ್ಲಿ ಪ್ರಧಾನ ಅಧಿಕಾರಿಗಳು ಇಲ್ಲದೆ ಕೇವಲ ಪ್ರಥಮ ದರ್ಜೆ ಸಹಾಯಕರು ಸೂಪರಿಡೆಂಟ್‌ರಿಂದಲೇ ಕಛೇರಿ ನಡೆಯುತ್ತಿದ್ದು, ನಿರ್ಧಾರ/ವಿಷಯಗಳ ಕ್ರಮ ಕೈಗೊಳ್ಳುವ ಅಧಿಕಾರವಿಲ್ಲದೆ ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಕೆಲ ಕಛೇರಿಗಳಲ್ಲಿ ಅಧಿಕಾರಿಗಳಿದ್ದರೆ ಸಿಬ್ಬಂದಿಗಳಿರುವುದಿಲ್ಲ. ಸಿಬ್ಬಂದಿಗಳು ಇದ್ದರೆ ಅಧಿಕಾರಿಗಳಿಲ್ಲದೆ ಹಾಗೂ ಕಂಪ್ಯೂಟರ್, ದೂರವಾಣಿಯು ಇಲ್ಲದೆ ಇರುವುದರಿಂದ ಸಾರ್ವಜನಿಕ ಕೆಲಸಕ್ಕೆ ತೊಂದರೆಯಾಗಿ ಹಿಂದುಳಿದ ಜಿಲ್ಲೆ ಅಭಿವೃದ್ಧಿಯಿಂದ ವಂಚಿತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಯಾದಗಿರಿ ಜಿಲ್ಲೆ ರಚನೆಯಾಗಿದ್ದರೂ ಇನ್ನೂ ಪೂರ್ಣ ಪ್ರಮಾಣದ ಅಧಿಕಾರಿಗಳ ನೇಮಕವಾಗದೆ ಇರಲು ಕಾರಣವೇನು?

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿ)

ಅ) ಯಾದಗಿರಿ ಜಿಲ್ಲೆಯಲ್ಲಿ ಒಟ್ಟು 70 ಜಿಲ್ಲಾಮಟ್ಟದ ಅಧಿಕಾರಿಗಳ ಹುದ್ದೆ ಇದ್ದು ಆ ಪೈಕಿ 20 ಇಲಾಖೆಗಳಲ್ಲಿ ಪ್ರಭಾರ ಅಧಿಕಾರಿಗಳಿರುತ್ತಾರೆ.

ಆ) ಹಂತ ಹಂತವಾಗಿ ಖಾಲಿ ಹುದ್ದೆಗಳನ್ನು ಅಗತ್ಯಕ್ಕನುಗುಣವಾಗಿ ತುಂಬಲು ಕ್ರಮ ತೆಗೆದುಕೊಳ್ಳಲಾಗುವುದು.

ಇ) ಖಾಯಂ ಅಧಿಕಾರಿಗಳು ಇಲ್ಲದ ಇಲಾಖೆಗಳಿಗೆ ಪ್ರಭಾರಿ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಎಫ್‌ಡಿಸಿ/ಸೂಪರಿಡೆಂಟ್‌ರಿಂದಲೇ ಕಛೇರಿ ನಡೆಯುತ್ತಿರುವ ಇಲಾಖೆಗಳು ಇರುವುದಿಲ್ಲ.

ಈ) ಜಿಲ್ಲಾ ಮಟ್ಟದ ಎಲ್ಲಾ ಕಛೇರಿಗಳಿಗೆ ನೂತನ ಜಿಲ್ಲೆ ರಚನೆಯಾದ ನಂತರ ಜಿಲ್ಲೆಗೆ ಬಿಡುಗಡೆಯಾದ ಅನುದಾನದಲ್ಲಿ ಕಂಪ್ಯೂಟರ್, ದೂರವಾಣಿ ಪಿಠೋಪಕರಣಗಳನ್ನು ಸರಬರಾಜು ಮಾಡಲಾಗಿದೆ.

ಉ) (ಆ)ಗೆ ನೀಡಿರುವ ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ.

KARNATAKA LEGISLATIVE ASSEMBLY

127

Dr. Malaka Reddy A.B. (Yadgiri)

a) Whether it has come to the notice of the Government that there are problems in developmental works and in convenience to general public as in-charge officers are appointed to most of the departments and there are no permanent officers.

b) What are the reasons for not appointing permanent officers despite the in ability of the in-charge officer to attend to the works of this district and thus causing inconvenience to the general public.

c) Whether it has come to the notice of the Government that the General Public are undergoing

severe problems as there are no in-charge officers in most of the departments and the officers are run by only FDAs/Superintendents who have no powers to take any action.

d) Whether it has come to the notice of the Government that bachward district is denied of developments as certain officers are not having either officers or staff and lack of facilities like Computers/Telephones.

e) What is the reason for not appointing full fledged officers despite formation of Yadgir District.

Jagadeesh Shetter
Chief Minister

a) Out of 70 District Level Officers, in-charge officers are working in about 20 departments.

b) Action will be taken to fill the vacant posts as per requirement stage by stage.

c) In-charge officers are appointed where there are no permanent officers. There are no departments, which are run by only FADs/Superintendents.

d) All the district Level Officers are provided with Computers, Telephones, Furniture, out of the grants released to the new district after its formation.

e) Does not arise in view of reply to (b)